

# ಮೈಕ್ರೋಘ್ಯಾಕ್ಸ್ ಪಲ್ಸ್

ಸಂಚಿಕೆ ೧೨– ಮೇ ೨೦೨೨

# ಅನಲಿಟಿಕಲ್ ಕಾಂಟ್ಯಾಕ್ಟ್ಸ


## Equifax

ಕಿರಣ್ ಸಮುದ್ರಲ

ವಿ ಪಿ - ಅನಲಿಟಿಕ್ಸ್

Kiran.samudrala@equifax.com

ಶ್ರುತಿ ಜೋಷಿ
ಎವಿಪಿ - ಅನಲಿಟಿಕ್ಸ್

Shruti.joshi@equifax.com

ವಂದನಾ ಪಾಂಚಾಲ್

ಸೀನಿಯರ್ ಎಗ್ಸಿಕ್ಯುಟಿವ್
- ಅನಲಿಟಿಕ್ಸ್

Vandana.panchal@equifax.com

## SIDBI

ಸಂಜಯ್ ಜೈನ್
ಜಿಎಂ- ಇಆರ್ ಡಿಎ
erdav@sidbi.in

ರಮೇಶ್ ಕುಮಾರ್ ಎ ಎಂ -- ಸಿಎಸ್&ಆರ್ ವಿ -
ಇಆರ್ ಡಿಎ

rameshk@sidbi.in

ಪರಿವಿಡಿ


| | |
|---|---|
| ಕಾರ್ಯಪಾಲಕ ಸಾರಾಂಶ | 04 |
| ಸಂಕ್ಷೇಪಣ ಮತ್ತು ಪದಕೋಶ | 05 |
| ಅತಿ ಸಣ್ಣ ಹಣಕಾಸು ಉದ್ದಿಮೆಯ ಅವಲೋಕನ | 06 |
| ವಿತರಣಾ ಪ್ರವೃತ್ತಿ | 09 |
| ಉದ್ದಿಮೆಯ ಅಪಾಯ ಚಿತ್ರಣ | 12 |
| ಭೌಗೋಳಿಕ ಅನಾವರಣ | 14 |
| ರಾಜಸ್ಥಾನ ರಾಜ್ಯ ಸಮಗ್ರ ಚಿತ್ರಣ | 17 |
| ಮಹತ್ವಾಕಾಂಕ್ಷೆಯ ಜಿಲ್ಲೆಗಳು | 22 |
| ಗ್ರಾಹಕ ಮಟ್ಟದ ವಿಶ್ಲೇಷಣೆ | 24 |

# ಕಾರ್ಯಪಾಲಕ ಸಾರಾಂಶ

ಎಂ ಎಫ್ ಐ ಪಲ್ಸ್ ನ ೧೨ನೇ ಆವೃತ್ತಿಯು ಡಿಸೆಂಬರ್ ೨೦೨೧ರವರೆಗಿನ ಕಾಲಘಟ್ಟದ ಚಿತ್ರಣವನ್ನೂ , ಆ ಸಮಯದಲ್ಲಿ ಅತಿ ಸಣ್ಣ ಹಣಕಾಸು ಉದ್ದಿಮೆಯ ಕ್ಷೇತ್ರದಲ್ಲಿನ ಬೆಳವಣಿಗೆಯನ್ನೂ ವಿವರವಾಗಿ ಬಿಂಬಿಸುತ್ತದೆ.

ಡಿಸೆಂಬರ್ ೩೧ರ ಹೊತ್ತಿಗೆ ಪೋರ್ಟ್ ಫೋಲಿಯೋ ಗಾತ್ರವು ರೂ.೨೩೬೧೭೮ ಲಕ್ಷ ಕೋಟಿಗಳಷ್ಟಿದ್ದು, ಅದರಲ್ಲಿ ೯.೬ ಕೋಟಿಗಳಷ್ಟು ಸಜೀವ ಸಾಲ. ರೂ.೬೬೮೪೯ ಕೋಟಿಗಳಷ್ಟು ಹಣವು ಓಎನ್ ಡಿ ೨೦೨೧ರಲ್ಲಿ ವಿತರಣೆಯಾಗಿದೆ. ಎನ್ ಬಿ ಎಫ್ ಸಿಗಳ ಸರಾಸರಿ ಟಿಕೆಟ್ ಗಾತ್ರವು ಅತಿ ಹೆಚ್ಚಿನದಾಗಿದ್ದು, ಉದ್ದಿಮೆಯ ಟಿಕೆಟ್ ಗಾತ್ರವನ್ನು ಮೀರಿಸಿದೆ. ಉದ್ದಿಮೆಯ ಪಿ ಓ ಎಸ್ ಡಿಸೆಂಬರ್ ೨೦೨೦ರಿಂದ ಡಿಸೆಂಬರ್ ೨೦೨೧ರವರೆಗಿನ ಅವಧಿಯಲ್ಲಿ ಶೇಕಡಾ ೩ ರಷ್ಟು ವಾರ್ಷಿಕ ಬೆಳವಣಿಗೆ ಕಂಡಿದ್ದು, ಸೆಪ್ಟೆಂಬರ್ ೨೦೨೧ರಿಂದ ಡಿಸೆಂಬರ್ ೨೦೨೧ರವರೆಗಿನ ತ್ರೈಮಾಸಿಕ ಅವಧಿಯಲ್ಲಿ ಶೇಕಡಾ ೪ ರಷ್ಟು ಬೆಳವಣಿಗೆಯನ್ನು ದಾಖಲಿಸಿದೆ. ಪೋರ್ಟ್ ಫೋಲಿಯೋ ಮೊತ್ತದೆಡೆಗೆ ಬ್ಯಾಂಕುಗಳು ಅತಿ ಹೆಚ್ಚಿನ ಕೊಡುಗೆ ನೀಡಿದ್ದು, ಎನ್ ಬಿ ಎಫ್ ಸಿ-ಎಂ ಎಫ್ ಐಗಳು ನಂತರದ ಸ್ಥಾನ ಪಡೆದಿವೆ.

ಓ ಎನ್ ಡಿ ೨೦೨೦ರಿಂದ ಓ ಎನ್ ಡಿ ೨೦೨೧ರ ಅವಧಿಯಲ್ಲಿ ವಿತರಣಾ ಮೊತ್ತವು ೭ ಪ್ರತಿಶತ ಹೆಚ್ಚಳ ಕಂಡಿದೆ. ಎಲ್ಲ ತ್ರೈಮಾಸಿಕಗಳಲ್ಲಿಯೂ ಬ್ಯಾಂಕುಗಳು ಅತಿ ಹೆಚ್ಚಿನ ಮೊತ್ತವನ್ನು ವಿತರಿಸಿದ ಗರಿಮೆಯನ್ನು ಹೊಂದಿದ್ದು, ಎನ್ ಬಿ ಎಫ್ ಸಿಗಳು ನಂತರದ ಸ್ಥಾನದಲ್ಲಿವೆ. ೩೦೦೦೦ ಮತ್ತು ಅದಕ್ಕಿಂತ ಹೆಚ್ಚಿನ ಟಿಕೆಟ್ ಗಾತ್ರದ ವಿಭಾಗಗಳು ಉತ್ತಮ ವಾರ್ಷಿಕ ಪ್ರಗತಿಯನ್ನು ಸಾಧಿಸಿವೆ. ೫೫ ಪ್ರತಿಶತ ಸಾಲಗಳು ೨೦೦೦೦ದಿಂದ ೫೦೦೦೦ದವರೆಗಿನ ಟಿಕೆಟ್ ಗಾತ್ರ ವಿಭಾಗಗಳಲ್ಲಿ ವಿತರಣೆಯಾಗಿವೆ. ಓ ಎನ್ ಡಿ ೨೦೨೦ರಿಂದ ಓ ಎನ್ ಡಿ ೨೦೨೧ರವರೆಗಿನ ಅವಧಿಯಲ್ಲಿ ಸರಾಸರಿ ಟಿಕೆಟ್ ಗಾತ್ರವು ಪ್ರತಿಶತ ೨೩ರಷ್ಟು ವೃದ್ಧಿಸಿದೆ.

ಸೆಪ್ಟೆಂಬರ್ ೨೦೨೧ರಲ್ಲಿ ಶೇಕಡಾ ೧೮.೭೭ರಷ್ಟಿದ್ದ ೧-೧೭೯ ಡಿಪಿಡಿ ಡೆಲಿಂಕ್ವೆನ್ಸಿಯು ಡಿಸೆಂಬರ್ ೨೦೨೧ರ ವೇಳೆಗೆ ಶೇಕಡಾ ೧೩.೮೦ಕ್ಕೆ ಇಳಿಯಿತು. ೬೦-೧೭೯ ದಿನಗಳ ಪಾಸ್ಟ್ ಡ್ಯೂ ಡೆಲಿಂಕ್ವೆನ್ಸಿಯು ಸೆಪ್ಟೆಂಬರ್ ೨೦೨೧ರಿಂದ ಡಿಸೆಂಬರ್ ೨೦೨೧ರ ಅವಧಿಯಲ್ಲಿ ಏರಿಕೆ ಕಂಡಿತು.

೩೧.೧೨.೨೦೨೧ರ ವೇಳೆಗೆ ೧೦ ಪ್ರಮುಖ ರಾಜ್ಯಗಳು ಪೋರ್ಟ್ ಫೋಲಿಯೋ ಗಾತ್ರದ ಶೇಕಡಾ ೮೨ರಷ್ಟನ್ನು ಕೊಡುಗೆ ನೀಡಿವೆ. ತಮಿಳುನಾಡು ರಾಜ್ಯವು ರೂ,೩೦೫೬೨ ಕೋಟಿಗಳ ಕೊಡುಗೆ ನೀಡಿ, ಅತಿ ಸಣ್ಣ ಹಣಕಾಸು ಉದ್ದಿಮೆಯ ಮುಂಚೂಣಿಯಲ್ಲಿದೆ. ೩೧.೧೨.೨೦೨೧ರ ವೇಳೆಗೆ ತಮಿಳುನಾಡು, ಬಿಹಾರ, ಪಶ್ಚಿಮ ಬಂಗಾಳ, ಕರ್ನಾಟಕ ಮತ್ತು ಉತ್ತರ ಪ್ರದೇಶಗಳು ಪಿ ಓ ಎಸ್ ಅನುಸಾರ ಮೊದಲ ಐದು ರಾಜ್ಯಗಳು. ಪಶ್ಚಿಮ ಬಂಗಾಳದ ೯೦+ ಡೆಲಿಂಕ್ವೆನ್ಸಿಯು ಇಡೀ ಉದ್ದಿಮೆಯ ಡೆಲಿಂಕ್ವೆನ್ಸಿಗಿಂತ ಅಧಿಕವಾಗಿದೆ.

ಈ ಸಂಚಿಕೆಯಲ್ಲಿ ರಾಜಸ್ಥಾನ ರಾಜ್ಯದ ಸಮಗ್ರ ಚಿತ್ರಣವನ್ನು ನೀಡಲಾಗಿದೆ. ೩೧.೧೨.೨೦೨೧ರಲ್ಲಿ ರಾಜಸ್ಥಾನದ ಪೋರ್ಟ್ ಫೋಲಿಯೋ ಮೊತ್ತವು ರೂ.೧೦೮೧೨ ಕೋಟಿಗಳು. ಓ ಎನ್ ಡಿ ೨೦೨೧ರ ಅವಧಿಯಲ್ಲಿ ರಾಜಸ್ಥಾನವು ವಿತರಿಸಿದ ಒಟ್ಟು ಸಾಲದ ಮೊತ್ತ ೨೯೦೩ ಕೋಟಿ ರೂ ಗಳು. ಈ ರಾಜ್ಯದ ಎನ್ ಬಿ ಎಫ್ ಸಿ ಸರಾಸರಿ ಟಿಕೆಟ್ ಗಾತ್ರವು ಎಲ್ಲ ಸಾಲದಾತರಿಗಿಂತ ಹೆಚ್ಚು. ಈ ರಾಜ್ಯದಲ್ಲಿ ಲಾಭಕ್ಕಲ್ಲದ ಎಂ ಎಫ್ ಐಯ ೯೦+ ಡೆಲಿಂಕ್ವೆನ್ಸಿಯು ಇತರೆಲ್ಲ ಸಾಲದಾತರಿಗಿಂತ ಕಡಿಮೆ. ಎ ಎಂ ಜೆ ೨೦೨೧ನ್ನು ಹೊರತು ಪಡಿಸಿದರೆ ಶೇಕಡಾ ೬೦ಕ್ಕಿಂತ ಹೆಚ್ಚಿನ ಸಾಲಗಳು ೨೦ಕೆ-೫೦ಕೆ ಟಿಕೆಟ್ ಗಾತ್ರ ವಿಭಾಗದಲ್ಲಿಯೇ ನೀಡಲ್ಪಟ್ಟಿವೆ. ರಾಜಸ್ಥಾನದ ಪಿಓಎಸ್ ಡಿಸೆಂಬರ್ ೨೦೨೦ರಿಂದ ಡಿಸೆಂಬರ್ ೨೦೨೧ರ ಅವಧಿಯಲ್ಲಿ ೧೫ ಪ್ರತಿಶತ ವಾರ್ಷಿಕ ಬೆಳವಣಿಗೆಯನ್ನು ದಾಖಲಿಸಿದೆ. ರಾಜಸ್ಥಾನದಲ್ಲಿ ಸೆಪ್ಟೆಂಬರ್ ೨೦೨೧ರಿಂದ ಡಿಸೆಂಬರ್ ೨೦೨೧ಕ್ಕೆ ರಾಜ್ಯದ ಒಟ್ಟಾರೆ ೯೦+ ಡೆಲಿಂಕ್ವೆನ್ಸಿಯು ಹೆಚ್ಚಳ ಕಂಡಿದೆ.

ಈ ಹನ್ನೆರಡನೇ ಸಂಚಿಕೆಯಲ್ಲಿ ನಾವು ೩೧.೧೨.೨೦೨೧ರ ಸಮಯದ ಗ್ರಾಹಕ ಮಟ್ಟದ ವಿಶ್ಲೇಷಣೆಯನ್ನು ನೀಡಿದ್ದೇವೆ. ಪ್ರತಿಶತ ೭೦ಕ್ಕಿಂತ ಹೆಚ್ಚಿನ ಗ್ರಾಹಕರು ಒಂದೇ ಒಂದು ಸಾಲವನ್ನು ಹೊಂದಿದ್ದಾರೆ. ಲಾಭಕ್ಕಲ್ಲದ ಉದ್ದಿಮೆಯು ಮಾತ್ರ ಎರಡು ಸಾಲಗಳನ್ನು ಪಡೆದಿರುವ ಅತ್ಯಧಿಕ ಗ್ರಾಹಕರನ್ನು ಹೊಂದಿದೆ.

# ಸಂಕ್ಷೇಪಣ ಮತ್ತು ಪದಕೋಶ

- ಎ ಟಿ ಎಸ್ **(**ಸರಾಸರಿ ಟಿಕೆಟ್ ಗಾತ್ರ**)=**ವಿತರಿಸಿದ ಮೊತ್ತ / ಸಾಲಗಳ ಸಂಖ್ಯೆ
- ಡಿ ಪಿ ಡಿ **=**ಡೇಸ್ ಪಾಸ್ಟ್ ಡ್ಯೂ
- ಸಜೀವ ಪಿ ಓ ಎಸ್ ಅಥವಾ ಸಾಲಗಾರರು ಅಥವಾ ಚಾಲ್ತಿಯಲ್ಲಿರುವ ಸಾಲಗಳು **=** ೦ ಇಂದ ೧೭೯ ಡಿ ಪಿ ಡಿ + ಹೊಸ ಖಾತೆಗಳು + ಚಾಲ್ತಿ ಖಾತೆಗಳು
- ಎಂ ಎಫ್ ಐ **=** ಮೈಕ್ರೋ ಫೈನಾನ್ಸ್ ಸಂಸ್ಥೆ
- ಪಿ ಓ ಎಸ್ **=** ಪೋರ್ಟ್ ಫೋಲಿಯೋ ಮೊತ್ತ
- ಯು ಟಿ **=** ಯೂನಿಯನ್ ಟೆರಿಟರಿ
- ಮಹತ್ವಾಕಾಂಕ್ಷೆಯ ಜಿಲ್ಲೆಗಳು (ಎ ಡಿ)**-**ಜಿಲ್ಲೆಗಳು **(**ಪ್ರಸ್ತುತ ೧೧೭) ಸಂಯುಕ್ತ ಸೂಚ್ಯಂಕಗಳಾದ ಆರೋಗ್ಯ ಮತ್ತು ಪೋಷಣೆ, ಶಿಕ್ಷಣ, ಕೃಷಿ ಮತ್ತು ನೀರಾವರಿ, ಆರ್ಥಿಕ ಸೇರ್ಪಡೆ, ಕೌಶಲಾಭಿವೃದ್ಧಿ ಮತ್ತು ಮೂಲಭೂತ ಸೌಕರ್ಯಗಳ ಆಧಾರದ ಮೇಲೆ ಅವಲಂಬಿತವಾಗಿರುವ ಮಾನವ ಬೆಳವಣಿಗೆಯ ಸೂಚ್ಯಂಕವನ್ನು ವರ್ಧಿಸುವುದಕ್ಕಾಗಿ ಭಾರತ ಸರಕಾರದ ನೀತಿ ಆಯೋಗದಿಂದ ಜನವರಿ ೨೦೧೮ರಲ್ಲಿ ಗುರುತಿಸಲ್ಪಟ್ಟಿರುವ ಜಿಲ್ಲೆಗಳು.
- ೧-೧೭೯ = ೧ರಿಂದ ೧೭೯ ಡಿಪಿಡಿ / ಸಜೀವ ಪಿ ಓ ಎಸ್
- ೧-೨೯ = ೧ರಿಂದ ೨೯ ಡಿಪಿಡಿ/ ಸಜೀವ ಪಿ ಓ ಎಸ್
- ೩೦-೫೯ = ೩೦ರಿಂದ ೫೯ ಡಿಪಿಡಿ/ ಸಜೀವ ಪಿ ಓ ಎಸ್
- ೬೦-೮೯ = ೬೦ರಿಂದ ೮೯ ಡಿಪಿಡಿ / ಸಜೀವ ಪಿ ಓ ಎಸ್
- ೯೦-೧೭೯ = ೯೦ರಿಂದ ೧೭೯ ಡಿಪಿಡಿ / ಸಜೀವ ಪಿ ಓ ಎಸ್
- ೩೦+ಡೆಲಿಂಕ್ವೆನ್ಸಿ = ೩೦ರಿಂದ ೧೭೯ ಡಿಪಿಡಿ / ಸಜೀವ ಪಿ ಓ ಎಸ್
- ೯೦+ಡೆಲಿಂಕ್ವೆನ್ಸಿ = ೯೦ರಿಂದ ೧೭೯ ಡಿಪಿಡಿ / ಸಜೀವ ಪಿ ಓ ಎಸ್


- ಓ ಎನ್ ಡಿ'೨೦ = ಅಕ್ಟೋಬರ್ ೨೦೨೦ರಿಂದ ಡಿಸೆಂಬರ್ ೨೦೨೦
- ಜೆ ಎಫ್ ಎಂ'೨೧ = ಜನವರಿ ೨೦೨೧ರಿಂದ ಮಾರ್ಚ್ ೨೦೨೧



# ಅತಿ ಸಣ್ಣ ಹಣಕಾಸು ಉದ್ದಿಮೆಯ ಅವಲೋಕನ

## ೩೧ ಡಿಸೆಂಬರ್ ೨೦೨೧ಕ್ಕೆ ಅತಿ ಸಣ್ಣ ಹಣಕಾಸು ಉದ್ದಿಮೆಯ ಚಿತ್ರ

| ೩೧.೧೨.೨೦೨೧ರ ಚಿತ್ರಣ | ಬ್ಯಾಂಕ್ | ಎಸ್ ಎಫ್ ಬಿ | ಎನ್ ಬಿಎಫ್ ಸಿ-ಎಂಎಫ್ ಐ | ಎನ್ ಬಿ ಎಫ್ ಸಿ | ಲಾಭಕ್ಕಲ್ಲದ ಎಂ ಎಫ್ ಐ | ಒಟ್ಟಾರೆ ಉದ್ದಿಮೆ |
|---|---|---|---|---|---|---|
| ವಿಶಿಷ್ಟ ಸಜೀವ ಸಾಲಗಾರರು ('000) | 25,532 | 12,677 | 26,892 | 5,997 | 834 | 71,932 |
| ಸಜೀವ ಸಾಲ (ಸಾವಿರಗಳಲ್ಲಿ) | 36,177 | 15,591 | 36,395 | 6,505 | 1,102 | 95,770 |
| ಪೋರ್ಟ್ ಫೋಲಿಯೋ (ಕೋಟಿಗಳಲ್ಲಿ) | 93,841 | 39,675 | 84,065 | 16,337 | 2,260 | 236,178 |
| ವಿತರಿತ ಮೊತ್ತ (ಕೋಟಿಗಳಲ್ಲಿ)- | 26,487 | 11,957 | 23,105 | 4,407 | 893 | 66,849 |
| ಸರಾಸರಿ ಟಿಕೆಟ್ ಗಾತ್ರ - ಓ ಎನ್ ಡಿ'೨೧ | 41,760 | 41,177 | 36,095 | 44,284 | 31,268 | 39,489 |
| ೩೦+ ಡೆಲಿಂಕ್ವೆನ್ಸಿ ಪಿ ಓ ಎಸ್ | 12.00% | 8.45% | 6.23% | 5.21% | 1.30% | 8.78% |
| ೯೦+ ಡೆಲಿಂಕ್ವೆನ್ಸಿ ಪಿ ಓ ಎಸ್ | 5.19% | 2.91% | 2.14% | 1.78% | 0.65% | 3.44% |





- ೩೧ ಡಿಸೆಂಬರ್ ೨೦೨೧ರಲ್ಲಿ ಪೋರ್ಟ್ ಫೋಲಿಯೋ ಮೊತ್ತವು ೯.೬ ಕೋಟಿ ಸಾಲ ಸಂಖ್ಯೆಗೆ ೨೩೬೧೭೮ ಕೋಟಿ ರೂಗಳು.
  ಓ ಎನ್ ಡಿ ೨೦೨೧ಕ್ಕೆ ಸಾಲ ವಿತರಣಾ ಮೊತ್ತವು ೬೬೮೪೯ ಕೋಟಿ ರೂಗಳು.
- ಓ ಎನ್ ಡಿ ೨೦೨೧ಕ್ಕೆ ಎನ್ ಬಿ ಎಫ್ ಸಿಯ ಸರಾಸರಿ ಟಿಕೆಟ್ ಗಾತ್ರವು ಉದ್ದಿಮೆಯ ಟಿಕೆಟ್ ಗಾತ್ರಕ್ಕಿಂತ ಹೆಚ್ಚು.
- ಬ್ಯಾಂಕುಗಳ ೩೦+ ಮತ್ತು ೯೦+ ಡೆಲಿಂಕ್ವೆನ್ಸಿಯು ಉದ್ದಿಮೆಯ ಡೆಲಿಂಕ್ವೆನ್ಸಿಗಿಂತ ಹೆಚ್ಚು.
-

# ಅತಿ ಸಣ್ಣ ಹಣಕಾಸು ಉದ್ದಿಮೆಯ ಅವಲೋಕನ

ಪೋರ್ಟ್ ಫೋಲಿಯೋ ಮೊತ್ತ (ಕೋಟಿಗಳಲ್ಲಿ)

| ವಿವರ | ಡಿಸ್'೨೦ | ಮಾರ್'೨೧ | ಜೂನ್'೨೧ | ಸೆಪ್'೨೧ | ಡಿಸ್'೨೧ |
|---|---|---|---|---|---|
| ಬ್ಯಾಂಕ್ | 96,683 | 109,867 | 95,674 | 92,725 | 93,841 |
| ಎಸ್ ಎಫ್ ಬಿ | 38,109 | 38,903 | 35,345 | 36,863 | 39,675 |
| ಎನ್ ಬಿ ಎಫ್ ಸಿ-ಎಂ ಎಫ್ ಐ | 73,166 | 79,420 | 72,856 | 79,932 | 84,065 |
| ಎನ್ ಬಿ ಎಫ್ ಸಿ | 18,988 | 18,992 | 16,140 | 14,621 | 16,337 |
| ಲಾಭಕ್ಕಲ್ಲದ ಎಂ ಎಫ್ ಐ | 1,872 | 2,095 | 2,045 | 1,982 | 2,260 |
| ಒಟ್ಟಾರೆ ಉದ್ದಿಮೆ | 228,818 | 249,277 | 222,060 | 226,123 | 236,178 |
| ತ್ರೈಮಾಸಿಕ ಬೆಳವಣಿಗೆ ದರ% | 0% | 9% | -11% | 2% | 4% |

## ಸಾಲದಾತರ ವಿಧದನ್ವಯ ಮಾರುಕಟ್ಟೆ ಪ್ರವೃತ್ತಿಗಳು




- ಸೆಪ್ಟೆಂಬರ್ ೨೦೨೧ರಿಂದ ಡಿಸೆಂಬರ್ ೨೦೨೧ರವರೆಗಿನ ತ್ರೈಮಾಸಿಕದಲ್ಲಿ ಎಂ ಎಫ್ ಐ ಉದ್ದಿಮೆಯು ೪ ಪ್ರತಿಶತ ಬೆಳವಣಿಗೆ ಕಂಡಿದೆ.
- ಡಿಸೆಂಬರ್ ೨೦೨೦ರಿಂದ ಡಿಸೆಂಬರ್ ೨೦೨೧ರವರೆಗಿನ ವಾರ್ಷಿಕ ಅವಧಿಯಲ್ಲಿ ಎಂ ಎಫ್ ಐ ಉದ್ದಿಮೆಯು ೩ ಪ್ರತಿಶತ ಬೆಳವಣಿಗೆ ಕಂಡಿದೆ.
- ಪೋರ್ಟ್ ಫೋಲಿಯೋ ಮೊತ್ತದೆಡೆಗೆ ಬ್ಯಾಂಕುಗಳು ಅತಿ ಹೆಚ್ಚಿನ ಕೊಡುಗೆ ನೀಡಿವೆ; ನಂತರದ ಸ್ಥಾನ ಎನ್ ಬಿ ಎಫ್ ಸಿ-ಎಂ ಎಫ್ ಐಗಳದ್ದು.



# ವಿತರಣಾ ಪ್ರವೃತ್ತಿಗಳು


ವಿಶ್ವವನ್ನು ಜ್ಞಾನದಿಂದ ಶಕ್ತಗೊಳಿಸುತ್ತಿದೆ

# ವಿತರಣಾ ಪ್ರವೃತ್ತಿಗಳು- ಸಂಸ್ಥೆ ಅನುಸಾರ

ವಿತರಿತ ಸಾಲಗಳ ಸಂಖ್ಯೆ (ಲಕ್ಷಗಳಲ್ಲಿ)ಲ

| ದಾತರು | OND'20 | JFM'21 | AMJ'21 | JAS'21 | OND'21 |
|---|---|---|---|---|---|
| ಬ್ಯಾಂಕ್ | 100 | 111 | 41 | 77 | 63 |
| ಎಸ್ ಎಫ್ ಬಿ | 21 | 32 | 9 | 36 | 29 |
| ಎನ್ ಬಿ ಎಫ್ ಸಿ-ಎಂ ಎಫ್ ಐ | 65 | 77 | 19 | 69 | 64 |
| ಎನ್ ಬಿ ಎಫ್ ಸಿ | 7 | 11 | 3 | 8 | 10 |
| ಲಾಭಕ್ಕಲ್ಲದ ಎಂ ಎಫ್ ಐ | 2 | 3 | 1 | 2 | 3 |
| ಒಟ್ಟಾರೆ ಉದ್ದಿಮೆ | 195 | 234 | 73 | 192 | 169 |

ಸಾಲದಾತರ ಅನುಸಾರ ಮಾರುಕಟ್ಟೆ ಪಾಲು ಪ್ರವೃತ್ತಿ





- ಒ ಎನ್ ಡಿ ೨೦೨೦ರಲ್ಲಿ ನೀಡಲಾದ ಸಾಲಗಳ ಸಂಖ್ಯೆಯು ಒ ಎನ್ ಡಿ ೨೦೨೧ರಲ್ಲಿ ಶೇಕಡಾ ೧೩ರಷ್ಟು ಕುಸಿಯಿತು. ಆದರೂ ಅದೇ ಅವಧಿಯಲ್ಲಿ ವಿತರಿತ ಹಣದ ಮೊತ್ತವು ಶೇಕಡಾ ಏಳರಷ್ಟು ಏರಿಕೆ ಕಂಡಿತು.
- ಎಲ್ಲ ತ್ರೈಮಾಸಿಕಗಳಲ್ಲಿಯೂ ಅತಿ ಹೆಚ್ಚು ಸಾಲ ವಿತರಣೆಯು ಬ್ಯಾಂಕುಗಳ ಮೂಲಕವೇ ಆಯಿತು; ನಂತರದ ಸ್ಥಾನ ಎನ್ ಬಿ ಎಫ್ ಸಿ-ಎಂ ಎಫ್ ಐಗಳದ್ದು.
- ಸಾಲ ವಿತರಣೆಯ ವಿಚಾರದಲ್ಲಿ ಎನ್ ಬಿ ಎಫ್ ಸಿ ಮತ್ತು ಲಾಭಕ್ಕಲ್ಲದ ಎಂ ಎಫ್ ಐಗಳು ಜೆ ಎ ಎಸ್ '೨೧ರಿಂದ ಒ ಎನ್ ಡಿ'೨೧ರ ಅವಧಿಯಲ್ಲಿ ಗಮನಾರ್ಹ ಬೆಳವಣಿಗೆ ಸಾಧಿಸಿವೆ.

# ಉದ್ದಿಮೆಯ ಟಿಕೆಟ್ ಗಾತ್ರ ಪ್ರವೃತ್ತಿ

ವಿತರಿತ ಸಾಲಗಳ ಸಂಖ್ಯೆ (ಲಕ್ಷಗಳಲ್ಲಿ)

| ಟಿಕೆಟ್ ಗಾತ್ರ | ಓಎನ್ಡಿ೨೦ | ಜೆಎಫ್ಎಂ'೨೧ | ಎಎಂಜೆ'೨೧ | ಜೆಎಎಸ್'೨೧ | ಓಎನ್ ಡಿ'೨೧ | ವಾರ್ಷಿಕ ಬೆಳವಣಿಗೆ ದರ |
|---|---|---|---|---|---|---|
| 0K-10K | 35 | 19 | 8 | 18 | 10 | -71% |
| 10K-20K | 20 | 18 | 7 | 20 | 12 | -40% |
| 20K-30K | 32 | 40 | 12 | 34 | 24 | -25% |
| 30K-40K | 43 | 58 | 16 | 47 | 46 | 7% |
| 40K-50K | 29 | 38 | 11 | 29 | 29 | 0% |
| 50K-60K | 18 | 28 | 9 | 25 | 23 | 28% |
| 60K ಮತ್ತು | 18 | 33 | 9 | 19 | 25 | 39% |
| ಒಟ್ಟು | 195 | 234 | 73 | 192 | 169 | -13% |
| ತ್ರೈಮಾಸಿಕ ವಿತರಣಾ ಬೆಳವಣಿಗೆ ದರ | - | 20% | -69% | 163% | -12% | - |
| ಸಮಗ್ರ ಭಾರತದ ಎ ಟಿ ಎಸ್(ರೂ) | 32,109 | 38,789 | 35,793 | 35,110 | 39,489 | - |
| ತ್ರೈಮಾಸಿಕ ಎಟಿಎಸ್ ಬೆಳವಣಿಗೆ ದರ | - | 21% | -8% | -2% | 12% | - |

ವಿತರಿತ ಸಾಲಗಳ ಸಂಖ್ಯೆ (ಲಕ್ಷಗಳಲ್ಲಿ)




- ೫೦ಕೆ/೫೦ಸಾವಿರ ಮತ್ತು ಅದನ್ನು ಮೀರಿದ ಟಿಕೆಟ್ ಗಾತ್ರ ವಿಭಾಗವು ಶೇಕಡಾ ೨೫ಕ್ಕಿಂತ ಹೆಚ್ಚು ವಾರ್ಷಿಕ ಅಭಿವೃದ್ಧಿಯನ್ನು ಸಾಧಿಸಿದೆ.
- ಶೇಕಡಾ ೫೫ಕ್ಕಿಂತ ಹೆಚ್ಚು ಸಾಲಗಳು ೨೦ಕೆ-೫೦ಕೆ ಟಿಕೆಟ್ ಗಾತ್ರ ವಿಭಾಗದಲ್ಲಿಯೇ ನೀಡಲ್ಪಟ್ಟಿವೆ.
- ಸರಾಸರಿ ಟಿಕೆಟ್ ಗಾತ್ರವು ಓಎನ್ ಡಿ'೨೦ರಿಂದ ಓಎನ್ ಡಿ'೨೧ರ ಅವಧಿಯಲ್ಲಿ ಶೇಕಡಾ ೨೩ರಷ್ಟು ಹೆಚ್ಚಿದೆ.

EQUIFAX® sidbi




# ಉದ್ದಿಮೆಯ ಅಪಾಯದ ಚಿತ್ರಣ

ವಿಶ್ವವನ್ನು ಜ್ಞಾನದಿಂದ ಶಕ್ತಗೊಳಿಸುತ್ತಿದೆ


EQUIFAX®

# ಡೆಲಿಂಕ್ವೆನ್ಸಿ ಪ್ರವೃತ್ತಿಗಳು

ಡಿಪಿಡಿ ಅನುಸಾರ ಡೆಲಿಕ್ವೆನ್ಸಿ

| ತ್ರೈಮಾಸಿಕ | 1-29 ಡಿಪಿಡಿ | 30-59 ಡಿಪಿಡಿ | 60-89 ಡಿಪಿಡಿ | 90-179 ಡಿಪಿಡಿ | 1-179 ಡಿಪಿಡಿ |
|---|---|---|---|---|---|
| ಡಿಸ್' 20 | 7.50% | 4.73% | 3.49% | 4.96% | 20.68% |
| ಮಾರ್' 21 | 4.55% | 2.90% | 2.01% | 4.12% | 13.58% |
| ಜೂನ್' 21 | 14.90% | 10.14% | 3.38% | 3.01% | 31.43% |
| ಸೆಪ್' 21 | 8.64% | 5.44% | 1.74% | 2.95% | 18.77% |
| ಡಿಸ್' 21 | 5.03% | 3.19% | 2.14% | 3.44% | 13.80% |

ಡಿಪಿಡಿ ಅನುಸಾರ ಡೆಲಿಕ್ವೆನ್ಸಿ





- ಸೆಪ್ಟೆಂಬರ್ ೨೦೨೧ರಲ್ಲಿ ಶೇಕಡಾ ೧೮.೭೭ರಷ್ಟಿದ್ದ ೧-೧೭೯ ಡಿಪಿಡಿ ಡೆಲಿಂಕ್ವೆನ್ಸಿಯು ಡಿಸೆಂಬರ್ ೨೦೨೧ರ ವೇಳೆಗೆ ಶೇಕಡಾ ೧೩.೮೦ರಷ್ಟು ಇಳಿಕೆ ಕಂಡಿತು.
- ೬೦-೧೭೯ ಡೆಲಿಂಕ್ವೆನ್ಸಿಯು ಸೆಪ್ಟೆಂಬರ್ ೨೦೨೧ರಿಂದ ಡಿಸೆಂಬರ್ ೨೦೨೧ರ ಅವಧಿಯಲ್ಲಿ ಏರಿಕೆ ಕಂಡಿತು.



# ಭೌಗೋಳಿಕ ಅನಾವರಣ


ವಿಶ್ವವನ್ನು ಜ್ಞಾನದಿಂದ ಶಕ್ತಗೊಳಿಸುತ್ತಿದೆ

# ೩೧.೧೨.೨೦೨೧ಕ್ಕೆ ರಾಜ್ಯ/ಕೇಂದ್ರಾಡಳಿತ ಪ್ರದೇಶವಾರು ಪೋರ್ಟ್ ಫೋಲಿಯೋ ಮೊತ್ತ




- ೩೧.೧೨.೨೦೨೧ರ ವೇಳೆಗೆ ಪ್ರಮುಖ ಹತ್ತು ರಾಜ್ಯಗಳು ಪೋರ್ಟ್ ಫೋಲಿಯೋ ಮೊತ್ತದೆಡೆಗೆ ೮೨ ಪ್ರತಿಶತ ಕೊಡುಗೆ ನೀಡಿವೆ.
- ರೂ.೩೦೬೫೨ ಕೋಟಿ ಕೊಡುಗೆ ನೀಡಿದ ತಮಿಳು ನಾಡು ಅತ್ಯಧಿಕ ಪೋರ್ಟ್ ಫೋಲಿಯೋ ಮೊತ್ತ ನೀಡಿದ ಹೆಗ್ಗಳಿಕೆಯೊಂದಿಗೆ ಮೊದಲ ಸ್ಥಾನದಲ್ಲಿದೆ.
- ೩೧.೧೨.೨೦೨೧ರ ವೇಳೆಗೆ ತಮಿಳುನಾಡು, ಬಿಹಾರ, ಪಶ್ಚಿಮ ಬಂಗಾಳ, ಕರ್ನಾಟಕ ಮತ್ತು ಉತ್ತರಪ್ರದೇಶಗಳು ಮೊದಲ ಐದು ಸ್ಥಾನದಲ್ಲಿವೆ.

# ೩೧.೧೨.೨೦೨೧ರ ವೇಳೆಗೆ ರಾಜ್ಯ/ಕೇಂದ್ರಾಡಳಿತ ಪ್ರದೇಶವಾರು ೯೦+ ಡೆಲಿಂಕ್ವೆನ್ಸಿ




- ೫ ಪ್ರಮುಖ ರಾಜ್ಯಗಳ ೯೦+ ಡೆಲಿಂಕ್ವೆನ್ಸಿ ಈ ಕೆಳಗಿನಂತಿದೆ:

| ತಮಿಳುನಾಡು | ಬಿಹಾರ | ಪಶ್ಚಿಮ ಬಂಗಾಳ | ಕರ್ನಾಟಕ | ಉತ್ತರಪ್ರದೇಶ |
|---|---|---|---|---|
| **2.54%** | **2.71%** | **7.88%** | **2.01%** | **2.01%** |

- ಪಶ್ಚಿಮ ಬಂಗಾಳ ರಾಜ್ಯದ ೯೦+ ಡೆಲಿಂಕ್ವೆನ್ಸಿಯು ಒಟ್ಟಾರೆ ಉದ್ದಿಮೆಯದಕ್ಕಿಂತ ೩.೪೪ ಪ್ರತಿಶತ ಅಧಿಕವಾಗಿದೆ.


ಸೂಚಿ: ಡೆಲಿಂಕ್ವೆನ್ಸಿಯು ಪಿಓಎಸ್ ಆಧಾರದ ಮೇಲೆ ನಿರ್ಧರಿಸಲ್ಪಟ್ಟಿದೆ.




# ಸಮಗ್ರ ರಾಜ್ಯ ಚಿತ್ರಣ: ರಾಜಸ್ಥಾನ

# ರಾಜಸ್ಥಾನ : ರಾಜ್ಯ ಚಿತ್ರಣ

| ೩೧.೧೨.೨೦೨೧ಕ್ಕೆ ರಾಜಸ್ಥಾನರಾಜ್ಯ | ಬ್ಯಾಂಕ್ | ಎಸ್‌ಎಫ್ ಬಿ | ಎನ್ಬಿಎಫ್ಸಿಎಂಎಫ್ | ಎನ್ಬಿಎಫ್ ಸಿ | ಲಾಭಕ್ಕಲ್ಲದ ಉದ್ದಿಮೆ | ಒಟ್ಟಾರೆಉದ್ದಿಮೆ |
|---|---|---|---|---|---|---|
| ಸಜೀವ ಸಾಲಗಳು ('000) | 2,107 | 556 | 1,738 | 193 | 9 | 4,603 |
| ಪೋರ್ಟ್ ಫೋಲಿಯೋ (ಕೋಟಿ ರೂ) | 4,765 | 1,334 | 4,163 | 534 | 16 | 10,812 |
| ಪೋರ್ಟ್ ಫೋಲಿಯೋ ಮೊತ್ತದಲ್ಲಿ ಮಾರುಕಟ್ಟೆ ಪಾಲು | 44% | 12% | 39% | 5% | 0% | - |
| ಓಎನ್ ಡಿ'೨೧ಕ್ಕೆ ವಿತರಿಸಿದ ಹಣ (ಕೋಟಿ ರೂ) | 1,192 | 371 | 1,180 | 154 | 6 | 2,903 |
| ಓಎನ್ ಡಿ'೨೧ಕ್ಕೆ ಸರಾಸರಿ ಟಿಕೆಟ್ ಗಾತ್ರ (ರೂ) | 36,209 | 37,792 | 36,319 | 42,946 | 31,738 | 36,744 |
| ೩೦+ ಡೆಲಿಂಕ್ವೆನ್ಸಿ (ಪಿಓಎಸ್) | 9.73% | 6.61% | 6.83% | 7.07% | 3.85% | 8.09% |
| 90+ ಡೆಲಿಂಕ್ವೆನ್ಸಿ (ಪಿಓಎಸ್) | 4.03% | 2.75% | 2.25% | 2.21% | 1.34% | 3.09% |





- ೩೧.೧೨.೨೦೨೧ಕ್ಕೆ ರಾಜಸ್ಥಾನದ ಪೋರ್ಟ್ ಫೋಲಿಯೋ ಮೊತ್ತವು ರೂ. ೧೦೮೧೨ ಕೋಟಿ.
- ಪೋರ್ಟ್ ಫೋಲಿಯೋ ಮೊತ್ತದೆಡೆಗಿನ ಅತಿ ಹೆಚ್ಚಿನ ಕೊಡುಗೆ ಮೊದಲು ಬ್ಯಾಂಕುಗಳದ್ದು; ನಂತರ ಎನ್ ಬಿ ಎಫ್ ಸಿ-ಎಂ ಎಫ್ ಐಗಳದ್ದು.
- ಓ ಎನ್ ಡಿ'೨೧ಕ್ಕೆ ರಾಜಸ್ಥಾನ ರಾಜ್ಯವು ರೂ.೨೯೦೩ಕೋಟಿರೂಗಳ ಸಾಲವನ್ನು ವಿತರಿಸಿದೆ.
- ಎನ್ ಬಿ ಎಫ್ ಸಿಗಳ ಸರಾಸರಿ ಟಿಕೆಟ್ ಗಾತ್ರವು ಎಲ್ಲ ಸಾಲದಾತರಿಗಿಂತ ಹೆಚ್ಚಿನದು.
- ರಾಜಸ್ಥಾನ ರಾಜ್ಯದಲ್ಲಿ ಲಾಭಕ್ಕಲ್ಲದ ಉದ್ದಿಮೆಯ ೯೦+ ಡೆಲಿಂಕ್ವೆನ್ಸಿಯು ಇತರೆಲ್ಲ ಸಾಲದಾತರಿಗಿಂತ ಕಡಿಮೆ.

# ರಾಜಸ್ಥಾನ-ಉದ್ದಿಮೆಯ ಟಿಕೆಟ್ ಗಾತ್ರ ಪ್ರವೃತ್ತಿ

ವಿತರಿತ ಸಾಲಗಳ ಸಂಖ್ಯೆ (ಲಕ್ಷಗಳಲ್ಲಿ)

| ಟಿಕೆಟ್ ಗಾತ್ರ | ಓಎನ್'೨ | ಜೆಎಫ್ಎಂ | ಎಎಂಜೆ' | ಜೆಎಎಸ್' | ಓಎನ್ಡಿ'೨೧ | ವಾರ್ಷಿಕ ಬೆಳವಣಿಗೆ ದರ% |
|---|---|---|---|---|---|---|
| **0ಕೆ-10ಕೆ** | 88 | 93 | 37 | 94 | 59 | 33% |
| 10ಕೆ-೨೦ಕೆ | 40 | 75 | 32 | 70 | 43 | 8% |
| **20ಕೆ-30ಕೆ** | 168 | 224 | 59 | 164 | 107 | -36% |
| **30ಕೆ-40ಕೆ** | 274 | 362 | 73 | 247 | 261 | -5% |
| **40ಕೆ-50ಕೆ** | 137 | 211 | 49 | 158 | 145 | 6% |
| **50ಕೆ-60ಕೆ** | 74 | 137 | 36 | 108 | 93 | 26% |
| **60ಕೆ** ಮತ್ತು | 80 | 135 | 38 | 79 | 82 | 2% |
| ಒಟ್ಟು | 861 | 1,237 | 324 | 920 | 790 | -8% |
| ತ್ರೈಮಾಸಿಕ ಸಾಲ | - | 44% | -74% | 184% | -14% | - |
| ವಿತರಣಾ ದರ | 37,419 | 35,797 | 34,942 | 36,744 | - | |
| ತ್ರೈಮಾಸಿಕ ಎಟಿಎಸ್ ಬೆಳವಣಿಗೆ ದರ | - | 6% | -4% | -2% | 5% | - |

ವಿತರಿತ ಸಾಲಗಳ ಸಂಖ್ಯೆ (ಲಕ್ಷಗಳಲ್ಲಿ)





- ಓಎನ್ ಡಿ'೨೦ರಿಂದ ಓಎನ್ ಡಿ'೨೧ರವರೆಗೆ ರಾಜಸ್ಥಾನದಲ್ಲಿ ವಿತರಿಸಲಾದ ಸಾಲಗಳ ಸಂಖ್ಯೆಯಲ್ಲಿ ೮ ಪ್ರತಿಶತ ಇಳಿಕೆಯಾಗಿದೆ. ಎಎಂಜೆ'೨೧ನ್ನು ಹೊರತು ಪಡಿಸಿದರೆ, ೭೦ ಪ್ರತಿಶತ ಸಾಲಗಳು ೨೦ಕೆ-೫೦ಕೆ ಟಿಕೆಟ್ ಗಾತ್ರದಲ್ಲಿಯೇ ವಿತರಣೆಯಾಗಿವೆ.
- ರಾಜಸ್ಥಾನದ ಎಟಿಎಸ್ ಜೆಎಎಸ್'೨೧ರಿಂದ ಓಎನ್ ಡಿ'೨೧ರವರೆಗಿನ ಅವಧಿಯಲ್ಲಿ ೫ ಪ್ರತಿಶತ ಮತ್ತು ಓಎನ್ ಡಿ'೨೦ರಿಂದ ಓ ಎನ್ ಡಿ'೨೧ರ ಅವಧಿಯಲ್ಲಿ ೪ ಪ್ರತಿಶತ ವೃದ್ಧಿಸಿದೆ.
- 

# ರಾಜಸ್ಥಾನ- ಪೋರ್ಟ್ ಫೋಲಿಯೋ ಪ್ರವೃತ್ತಿಗಳು

ಪೋರ್ಟ್ ಫೋಲಿಯೋ ಮೊತ್ತ (ಕೋಟಿಗಳಲ್ಲಿ)


| ವಿವರ | ಡಿಸ್'೨೦ | ಮಾರ್'೨೧ | ಜೂನ್'೨೧ | ಸೆಪ್'೨೧ | ಡಿಸ್'೨೧ |
|---|---|---|---|---|---|
| ಬ್ಯಾಂಕ್ | 4,222 | 5,346 | 4,768 | 4,844 | 4,765 |
| ಎಸ್ ಎಫ್ ಬಿ | 1,173 | 1,300 | 1,177 | 1,280 | 1,334 |
| ಎನ್ ಬಿ ಎಫ್ ಸಿ-ಎಂಎಫ್ಐ | 3,261 | 3,771 | 3,389 | 3,860 | 4,163 |
| ಎನ್ ಬಿ ಎಫ್ ಸಿ | 748 | 665 | 531 | 496 | 534 |
| ಲಾಭಕ್ಕಲ್ಲದ ಎಂ ಎಫ್ ಐ | 3 | 3 | 2 | 14 | 16 |
| ರಾಜಸ್ಥಾನ | 9,407 | 11,085 | 9,867 | 10,494 | 10,812 |
| ತ್ರೈಮಾಸಿಕ ಬೆಳವಣಿಗೆ ದರ | - | 18% | -11% | 6% | 3% |




- ಡಿಸೆಂಬರ್ ೨೦೨೦ರಿಂದ ಡಿಸೆಂಬರ್ ೨೦೨೧ರವರೆಗೆ ರಾಜಸ್ಥಾನವು ೧೫ ಪ್ರತಿಶತ ವಾರ್ಷಿಕ ಪ್ರಗತಿಯನ್ನು ದಾಖಲಿಸಿದೆ.
- ಡಿಸೆಂಬರ್ ೨೦೨೦ರಿಂದ ಡಿಸೆಂಬರ್ ೨೦೨೧ರವರೆಗೆ ಲಾಭಕ್ಕಲ್ಲದ ಎಂ ಎಫ್ ಐಗಳು ಅತಿ ಹೆಚ್ಚು ವಾರ್ಷಿಕ ಬೆಳವಣಿಗೆ, ಅಂದರೆ ೪೩೩ ಪ್ರತಿಶತ ಬೆಳವಣಿಗೆಯನ್ನು ದಾಖಲಿಸಿದರೆ, ಅದೇ ಅವಧಿಯಲ್ಲಿ ಎನ್ ಬಿ ಎಫ್ ಸಿ-ಎಂ ಎಫ್ ಐಗಳು ೨೮ ಪ್ರತಿಶತ ಬೆಳವಣಿಗೆಯನ್ನು ಕಂಡಿವೆ.
- ಪಿಓಎಸ್ ಗೆ ಶೇಕಡಾ ೮೦ಕ್ಕಿಂತಲೂ ಹೆಚ್ಚಿನ ಕೊಡುಗೆಯನ್ನು ಬ್ಯಾಂಕುಗಳು ಮತ್ತು ಎನ್ ಬಿ ಎಫ್ ಸಿಗಳು ನೀಡಿವೆ.

# ರಾಜಸ್ಥಾನ : ೯೦+ ಡೆಲಿಂಕ್ವೆನ್ಸಿ ಪ್ರವೃತ್ತಿಗಳು

| ಸಾಲದಾತರ ವಿಧ | ಡಿಸ್'೨೦ | ಮಾರ್'೨೧ | ಜೂನ್'೨೧ | ಸೆಪ್'೨೧ | ಡಿಸ್'೨೧ |
|---|---|---|---|---|---|
| ಬ್ಯಾಂಕುಗಳು | 1.78% | 1.67% | 1.52% | 2.29% | 4.03% |
| ಎಸ್ ಎಫ್ ಬಿ | 2.78% | 2.86% | 1.91% | 3.87% | 2.75% |
| ಎನ್ ಬಿ ಎಫ್ ಸಿ-ಎಂ ಎಫ್ ಐ | 2.84% | 2.04% | 2.65% | 1.73% | 2.25% |
| ಎನ್ ಬಿ ಎಫ್ ಸಿ | 1.63% | 2.28% | 3.63% | 4.10% | 2.21% |
| ಲಾಭಕ್ಕಲ್ಲದ ಎಂ ಎಫ್ ಐ | 4.25% | 4.25% | 1.47% | 2.26% | 1.34% |
| ರಾಜಸ್ಥಾನ | 2.26% | 1.98% | 2.07% | 2.36% | 3.09% |




- ರಾಜಸ್ಥಾನದ ಒಟ್ಟಾರೆ ೯೦+ ಡೆಲಿಂಕ್ವೆನ್ಸಿಯು ಸೆಪ್ಟೆಂಬರ್ ೨೦೨೧ರಿಂದ ಡಿಸೆಂಬರ್ ೨೦೨೧ರವರೆಗಿನ ಅವಧಿಯಲ್ಲಿ ಹೆಚ್ಚಿದೆ.
- ಸೆಪ್ಟೆಂಬರ್ ೨೦೨೧ಕ್ಕೆ ಹೋಲಿಸಿದರೆ ಎಸ್ ಎಫ್ ಬಿಗಳು. ಎನ್ ಬಿ ಎಫ್ ಸಿಗಳು ಮತ್ತು ಲಾಭಕ್ಕಲ್ಲದ ಎಂ ಎಫ್ ಐಗಳ ೯೦+ ಡೆಲಿಂಕ್ವೆನ್ಸಿಯು ಹೆಚ್ಚಿದೆ.
- ಡಿಸೆಂಬರ್ ೨೦೨೧ರಲ್ಲಿ ಬ್ಯಾಂಕುಗಳ ೯೦+ ಡೆಲಿಂಕ್ವೆನ್ಸಿಯು ರಾಜಸ್ಥಾನದ ಒಟ್ಟಾರೆ ೯೦+ ಡೆಲಿಂಕ್ವೆನ್ಸಿಗಿಂತ ಹೆಚ್ಚು ಇದೆ.



# ಮಹತ್ವಾಕಾಂಕ್ಷೆಯ ಜಿಲ್ಲೆಗಳು

ವಿಶ್ವವನ್ನು ಜ್ಞಾನದಿಂದ ಶಕ್ತಗೊಳಿಸುತ್ತಿದೆ


# ಮಹತ್ವಾಕಾಂಕ್ಷೆಯ ಜಿಲ್ಲೆಗಳು-

# ಡಿಸೆಂಬರ್ ೨೦೨೧ಕ್ಕೆ ಅವಲೋಕನ


| ಮಹತ್ವಾಕಾಂಕ್ಷೆಯ ಜಿಲ್ಲೆಗಳ ಬೆಳವಣಿಗೆ ವಿವರ | ಡಿಸೆಂಬರ್೨೦೧೭ | ಡಿಸೆಂಬರ್೨೦೨೧ | ಬೆಳವಣಿಗೆ% |
|---|---|---|---|
| ಗ್ರಾಹಕರ ಸಂಖ್ಯಾ ವಿಸ್ತಾರ (ಸಾವಿರ) | ೪೧೫೫ | ೮೬೧೮ | ೧೦೭% |
| ವಿತರಿತ ಮೊತ್ತ (ಕೋಟಿ ರೂ) | ೧೪೩೭೪ | ೩೫೩೪೩ | ೧೪೬% |
| ಸಜೀವ ಸಾಲ (ಸಾವಿರ) | ೬೯೨೫ | ೧೩೩೬೩ | ೯೩% |
| ಪೋರ್ಟ್‌ ಫೋಲಿಯೋ ಮೊತ್ತ (ಕೋಟಿ ರೂ) | ೧೧೧೭೫ | ೩೧೯೧೮ | ೧೮೬% |
| ೩೦+ ಡೆಲಿಂಕ್ವೆನ್ಸಿ | ೧.೫೪% | ೬.೮೭% | |
| ೯೦+ ಡೆಲಿಂಕ್ವೆನ್ಸಿ | ೦.೭೫% | 2.೭೦% | |

- ೩೧ ಡಿಸೆಂಬರ್ ನಲ್ಲಿ ಮಹತ್ವಾಕಾಂಕ್ಷೆಯ ಜಿಲ್ಲೆಗಳ ಪೋರ್ಟ್‌ ಫೋಲಿಯೋ ಮೊತ್ತ, ೧.೩೩ ಕೋಟಿ ಸಜೀವ ಸಾಲಕ್ಕೆ ೩೧೯೧೮ ಕೋಟಿ ರೂಪಾಯಿಗಳು.
- ಡಿಸೆಂಬರ್ ೨೦೧೭ರಿಂದ ಡಿಸೆಂಬರ್ ೨೦೨೧ಕ್ಕೆ ಗ್ರಾಹಕರ ಸಂಖ್ಯೆಯು ಶೇಕಡಾ ೧೦೭ರಷ್ಟು ಹೆಚ್ಚಳ ಕಂಡಿತು.
- ಜನವರಿ೨೦೨೧ರಿಂದ ಡಿಸೆಂಬರ್ ೨೦೨೧ರವರೆಗೆ ರೂ.೩೫,೩೪೩ ಕೋಟಿಗಳಷ್ಟು ಸಾಲವನ್ನು ವಿತರಿಸಲಾಯಿತು.
- ಬ್ಯಾಂಕುಗಳ ೩೦+ ಮತ್ತು ೯೦+ ಡೆಲಿಂಕ್ವೆನ್ಸಿಯು ಮಹತ್ವಾಕಾಂಕ್ಷೆ ಜಿಲ್ಲೆಗಳ ಒಟ್ಟಾರೆ ೩೦+ ಮತ್ತು ೯೦+ ಡೆಲಿಂಕ್ವೆನ್ಸಿಗಿಂತ ಹೆಚ್ಚು.

ಪೋರ್ಟ್‌ ಫೋಲಿಯೋ (ಕೋಟಿ ರೂ)





ಜನವರಿ'೨೧ರಿಂದ ಡಿಸೆಂಬರ್'೨೧ರವರೆಗೆ ವಿತರಿತ ಮೊತ್ತ (ಕೋಟಿ ರೂ)




ಬ್ಯಾಂಕ್ ಎಸ್‌ಎಫ್ ಬಿ ಎನ್ ಬಿಎಫ್ ಸಿ-ಎಂಎಫ್ಐ ಎನ್ ಬಿಎಫ್ ಸಿ ಲಾಭಕ್ಕಲ್ಲದ ಎಂಎಫ್ಐ

ಸಾಲದಾತರ ವಿಧದನ್ವಯ 30+ ಮತ್ತು 90+ ಪಿಓಎಸ್ ಡೆಲಿಂಕ್ವೆನ್ಸಿ






ಸೂಚಿ *ವಿತರಣೆ; ಜನವರಿ ೨೦೧೭ರಿಂದ ಡಿಸೆಂಬರ್ ೨೦೧೭ರವರೆಗೆ
**ವಿತರಣೆ: ಜನವರಿ ೨೦೨೧ರಿನ್ದ ಡಿಸೆಂಬರ್ ೨೦೨೧ರವರೆಗೆ
ಡೆಲಿಂಕೆನ್ಸಿಯನು ಪಿಓಎಸ್ ಆದಾರದ ಮೇಲೆ ಗಣಿಸಲಾಗಿದೆ.




# ಗ್ರಾಹಕ ಮಟ್ಟದ ವಿಶ್ಲೇಷಣೆ

ವಿಶ್ವವನ್ನು ಜ್ಞಾನದಿಂದ ಶಕ್ತಗೊಳಿಸುತ್ತಿದೆ

# ೩೧ ಡಿಸೆಂಬರ್ ೨೦೨೧ರಂತೆ ಗ್ರಾಹಕ ಮಟ್ಟದ ವಿಶ್ಲೇಷಣೆ:

ವಿಶಿಷ್ಟ ಸಜೀವ ಸಾಲಗಾರರು
(ಸಾವಿರಗಳಲ್ಲಿ)




- ಒಂದೇ ಒಂದು ಸಾಲ ಹೊಂದಿರುವ ಗ್ರಾಹಕರ ಸಂಖ್ಯೆ (೦-೧೭೯ ಡಿಪಿಡಿ)
- ಎರಡು ಸಾಲ ಹೊಂದಿರುವ ಗ್ರಾಹಕರ ಸಂಖ್ಯೆ (೦-೧೭೯ ಡಿಪಿಡಿ)
- ೩ ಅಥವಾ ಅದಕ್ಕಿಂತ ಹೆಚ್ಚು ಸಾಲ ಹೊಂದಿರುವ ಗ್ರಾಹಕರ ಸಂಖ್ಯೆ (೦-೧೭೯ ಡಿಪಿಡಿ)

- ಶೇಕಡಾ ಎಪ್ಪತ್ತಕ್ಕಿಂತ ಹೆಚ್ಚು ಗ್ರಾಹಕರು ಒಂದೇ ಒಂದು ಸಾಲ ಹೊಂದಿದ್ದಾರೆ

- ಲಾಭಕ್ಕಲ್ಲದ ಎಂ ಎಫ್ ಐಗಳು ಎರಡು ಸಾಲ ಹೊಂದಿರುವ ಅತಿ ಹೆಚ್ಚು ಗ್ರಾಹಕರನ್ನು ಪಡೆದಿವೆ

## ಸಿಡ್ಬಿಯ ಬಗ್ಗೆ:

ಸಿಡ್ಬಿ, ಅಥವಾ ಸಣ್ಣ ಉದ್ದಿಮೆಗಳ ಬೆಳವಣಿಗೆಗಾಗಿ ಸ್ಥಾಪಿಸಲಾದ ಭಾರತೀಯ ಬ್ಯಾಂಕ್, ಪಾರ್ಲಿಮೆಂಟಿನ ಅನುಚ್ಛೇದದ ಕೆಳಗೆ, ೧೯೯೦ರಲ್ಲಿ ಸ್ಥಾಪಿತವಾಯಿತು. ಸಿಡ್ಬಿಯು ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ವರ್ಗದ ಉದ್ದಿಮೆಗಳ ಉದ್ಧಾರ, ಧನಸಹಾಯ ಮತ್ತು ಬೆಳವಣಿಗೆ ಎಂಬ ಮೂರು ಮುಖ್ಯ ಉದ್ದೇಶಗಳಿಗಾಗಿ ಸ್ಥಾಪಿತವಾದ, ಮತ್ತು ಅಂಥದೇ ಚಟುವಟಿಕೆ ಹೊಂದಿದ ಸಂಸ್ಥೆಗಳಲ್ಲಿ ಸಾಮರಸ್ಯ ತರುವುದನ್ನು ಮುಖ್ಯ ಗುರಿಯಾಗಿ ಹೊಂದಿದ ಸಂಸ್ಥೆ. ಕಾಲಾನಂತರದಲ್ಲಿ ಸಿಡ್ಬಿಯು ತನ್ನ ವಿವಿಧ ಆರ್ಥಿಕ ಮತ್ತು ಅಭಿವೃದ್ಧಿ ಚಟುವಟಿಕೆಗಳಿಂದ ದೇಶದ ಮೂಲೆಮೂಲೆಗಳಲ್ಲಿಯೂ ಜನರ ಜೀವನವನ್ನು ಸುಧಾರಿಸಿದೆ; ಇಡಿಯ ಎಂಎಸ್ಎಂಇ ಜಾಲದ ಮೇಲೆ ತನ್ನ ಪ್ರಭಾವವನ್ನು ಬೀರಿದೆ; ಅಷ್ಟೇ ಅಲ್ಲದೆ, ಎಂಎಸ್ಎಂಇ ಪರಿಸರದಲ್ಲಿ ಅನೇಕ ನಂಬಲರ್ಹ ಸಂಸ್ಥೆಗಳೊಂದಿಗೆ ಸಂಬಂಧ ಸ್ಥಾಪಿಸಿಕೊಂಡಿದೆ.

ಎಂಎಸ್ಎಂಇ ಜಾಲದಲ್ಲಿನ ಮಾಹಿತಿ ಕೊರತೆಗಳನ್ನು ನೀಗಲು ಸಿಡ್ಬಿಯು ವಿಷನ್2.೦ ಅಡಿಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅದರಲ್ಲಿ ಎಂಎಸ್ಎಂಇ ಪಲ್ಸ್ ಕೂಡ ಒಂದು. ಈ ಪುಸ್ತಕವು, ಎಂಎಸ್ಎಂಇಗಳ, ಕ್ರಿಸಿದೆಕ್ಸ್ ನ ಆರೋಗ್ಯದ ಮೇಲೆ ಕಣ್ಣಿಡುತ್ತ, ಸಾಲದಾತರು, ಸಂಸ್ಥೆಗಳು ಇತ್ಯಾದಿಗಳ ಮೇಲೆ ಬೆಳಕು ಚೆಲ್ಲುತ್ತ, ಎಂಎಸ್ಇ ನಾಡಿಯನ್ನು ಅಳೆಯುತ್ತ ಸಂಸ್ಥೆಗಳ ಮಹತ್ವಾಕಾಂಕ್ಷೆಯನ್ನು ಸರಿಯಾಗಿ ಅರ್ಥೈಸಿಕೊಂಡಿದೆ.

## ಅತಿ ಸಣ್ಣ ಉದ್ದಿಮೆಯಲ್ಲಿ ಸಿಡ್ಬಿ

ಅತಿ ಸಣ್ಣ ಉದ್ದಿಮೆಯ ಚಳವಳಿಯಲ್ಲಿ ಸಕ್ರಿಯ ಪಾತ್ರ ವಹಿಸಿರುವ ಸಿಡ್ಬಿಯು ಸಂಸ್ಥೆಗಳಿಗೆ ಧನ ಸಹಾಯ ನೀಡುವ ವಿಷಯದಲ್ಲಿ ದಾಪುಗಾಲಿಟ್ಟಿದೆ. ಮಾರ್ಚ್ ೩೧, ೨೦೨೧ರವರೆಗೆ ಬ್ಯಾಂಕಿನ ವತಿಯಿಂದ ಅತಿ ಸಣ್ಣ ಉದ್ದಿಮೆಗಳಿಗೆ ನೀಡಲಾದ ಒಟ್ಟು ಸಾಲ ರೂ.೨೦೫೬೮ ಕೋಟಿಗಳು.ಇದರಿಂದ ಸಹಾಯ ಪಡೆದ ಒಟ್ಟು ಘಟಕಗಳ ಸಂಖ್ಯೆ ಸುಮಾರು ನಾಲ್ಕು ಕೋಟಿ. ಸಾಲ ಮತ್ತು ಈಕ್ವಿಟಿ ಸಹಾಯವು ಈ ಘಟಕಗಳಿಗೆ ಉತ್ತಮ ಬೆಂಬಲ ನೀಡಿದ್ದಲ್ಲದೆ ಅವುಗಳ ಸಾಮರ್ಥ್ಯ ಹೆಚ್ಚಲು, ಅವುಗಳಲ್ಲಿ ಕಾರ್ಪೊರೇಟ್ ಆಡಳಿತ ಮೈಗೂಡಲು ಕೂಡ ತನ್ನ ಕಂಪ್ಲೈಯನ್ಸ್ ಅಸೆಸ್ಮೆಂಟ್ ಟೂಲ್ಸ್ ಮುಂತಾದವುಗಳಿಂದ ಸಹಕಾರ ನೀಡಿದೆ. ಆಗಷ್ಟೇ ಹುಟ್ಟಿದ ಎಳೆಯ ಕಂದಮ್ಮಗಳಂಥ ಘಟಕಗಳನ್ನು ದಷ್ಟಪುಷ್ಟವಾಗಿ ಬೆಳೆದು ತನ್ನ ಕಾಲ ಮೇಲೆ ತಾನು ನಿಲ್ಲುವಂಥ ಉದ್ದಿಮೆಗಳನ್ನಾಗಿ ರೂಪಿಸಿದ್ದಲ್ಲದೆ, ನಮ್ಮ ೮ ಪಾರ್ಟ್ನರ್ ಮೈಕ್ರೋ ಫೈನಾನ್ಸ್ ಇಂಡಸ್ಟ್ರಿಗಳನ್ನು ಎಸ್ಎಫ್ ಬಿ/ಯೂನಿವರ್ಸಲ್ ಬ್ಯಾಂಕುಗಳನ್ನಾಗಿ ಪರಿವರ್ತಿಸಲೂ ನೆರವಾಗಿದ್ದೇವೆ. ಇದಲ್ಲದೆ ನಾವು ಹಿಡಿದ ಹೊಸ ಹಾದಿಯು ಏನೆಂದರೆ ಅತಿ ಸಣ್ಣ ಉದ್ದಿಮೆಗಳಿಗೆ ನಮ್ಮ ಪಾಲುದಾರ ಸಂಸ್ಥೆಗಳೊಡನೆ ಮಾಡಿಕೊಂಡ ಒಪ್ಪಂದದ ಮೂಲಕ ನೇರವಾಗಿ ಸಾಲ ನೀಡುವುದು. ಈ ಸಣ್ಣ ಟಿಕೆಟ್ ಗಾತ್ರದ ಸಾಲವನ್ನು ಸುಮಾರು ೫೦೦೦೦ ರೂಪಾಯಿಗಳಿಂದ ೫ ಲಕ್ಷ ರೂಪಾಯಿಗಳವರೆಗೂ ಪಾಲುದಾರ ಸಂಸ್ಥೆಗಳ ಜೊತೆ ಕೈಗೂಡಿಸಿ ನೀಡಲಾಗುವುದು. ಅತಿ ಮುಖ್ಯವಾಗಿ ಮಾರುಕಟ್ಟೆ ದರಕ್ಕಿಂತ ಸಾಕಷ್ಟು ಕಡಿಮೆ ಬಡ್ಡಿ ದರದಲ್ಲಿ ನೀಡುವುದರಿಂದ ಪಿರಮಿಡ್ಡಿನ ಬುಡದಲ್ಲಿರುವ ಘಟಕಗಳನ್ನು ಸಶಕ್ತಗೊಳಿಸುವುದು ಸಾಧ್ಯವಾಗುತ್ತಿದೆ.

## ಈಕ್ವಿಫ್ಯಾಕ್ಸ್ ಬಗ್ಗೆ

**ಈಕ್ವಿಫ್ಯಾಕ್ಸ್** ಒಂದು ಜಾಗತಿಕ ಮಾಹಿತಿ ಸಂಗ್ರಹ ಸಂಸ್ಥೆ. ಈ ಸಂಸ್ಥೆಯು ತನ್ನ ನಂಬಿಕೆಗೆ ಅರ್ಹವಾದ ಮಾಹಿತಿ ಸಂಗ್ರಹವನ್ನು ಹೊಸ ರೀತಿಯ ವಿಶ್ಲೇಷಣೆ, ಹೊಸ ತಂತ್ರಜ್ಞಾನ, ಉದ್ಯಮ ಪರಿಣತಿಗಳನ್ನು ಬಳಸಿಕೊಂಡು ಜಾಗತಿಕವಾಗಿ ಸಂಸ್ಥೆಗಳನ್ನೂ, ವ್ಯಕ್ತಿಗಳನ್ನೂ ತನ್ನ ವಿಶ್ಲೇಷಣಾತ್ಮಕ ಮಾಹಿತಿ ನೀಡಿ ಸಶಕ್ತರನ್ನಗಿ ಮಾಡುತ್ತಿದೆ. ಈ ಮಾಹಿತಿ ಮತ್ತು ವಿಶ್ಲೇಷಣೆಯ ನೆರವಿನಿಂದ ಉದ್ದಿಮೆಗಳು ತಮ್ಮ ವ್ಯವಹಾರದಲ್ಲಿ ಹೆಚ್ಚು ಮಾಹಿತಿಪೂರ್ಣವಾದ ಮತ್ತು ಯುಕ್ತವಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತಿದೆ.

ಅಟ್ಲಾಂಟದಲ್ಲಿ ತನ್ನ ಪ್ರಧಾನ ಕಛೇರಿಯನ್ನು ಹೊಂದಿರುವ **ಈಕ್ವಿಫ್ಯಾಕ್ಸ್** ಉತ್ತರ ಅಮೇರಿಕಾ, ಮಧ್ಯ ಮತ್ತು ದಕ್ಷಿಣ ಅಮೇರಿಕಾ, ಯೂರೋಪ್ ಮತ್ತು ಏಷ್ಯಾ ಪೆಸಿಫಿಕ್ ಭೂಭಾಗದಲ್ಲಿರುವ ೨೪ ದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿದೆ ಅಥವಾ ಬಂಡವಾಳ ಹೂಡಿದೆ. ಸ್ಟ್ಯಾಂಡರ್ಡ್ ಮತ್ತು ಪೂರ್ಸ್ (ಎಸ್ ಅಂಡ್ ಪಿ) ಸಂಸ್ಥೆಯ ಸದಸ್ಯನಾಗಿರುವ ಇದು ತನ್ನ ಶೇರುಗಳನ್ನು ನ್ಯೂಯಾರ್ಕ್ ಸ್ಟಾಕ್ ಎಕ್ಸ್ಚೇಂಜ್ ಮೂಲಕ ಟ್ರೇಡ್ ಮಾಡುತ್ತಿದೆ. ಈ ಶೇರುಗಳ ಸಂಕೇತ ನಾಮ ಇಎಫ್ಎಕ್ಸ್. **ಈಕ್ವಿಫ್ಯಾಕ್ಸ್** ಪ್ರಪಂಚದಾದ್ಯಂತ ೧೧೦೦೦ ಸಿಬ್ಬಂದಿಯನ್ನು ಹೊಂದಿದೆ. ೧೨೦ ವರ್ಷಗಳ ಜಾಗತಿಕ ಇತಿಹಾಸ ಹೊಂದಿರುವ ಈ ಸಂಸ್ಥೆಯು ೨೦೧೧ರಲ್ಲಿ ಭಾರತದಲ್ಲಿ ತನ್ನ ಶಾಖೆಯನ್ನು ತೆರೆಯಿತು. ಸಿಐಸಿ ಆಗಿ ಕಾರ್ಯ ನಿರ್ವಹಿಸಲು ಆರ್ ಬಿ ಐನಿಂದ ಲೈಸೆನ್ಸ್ ಪಡೆಯಿತು. ಕಳೆದ ೯ ವರ್ಷಗಳಲ್ಲಿ ಈ ಸಂಸ್ಥೆಯು ೪೦೦೦ಕ್ಕಿಂತಲೂ ಅಧಿಕ ಗ್ರಾಹಕರನ್ನು ಸಂಪಾದಿಸಿಕೊಂಡಿದ್ದು, ಅದರಲ್ಲಿ ಬ್ಯಾಂಕುಗಳು, ಅತಿ ಸಣ್ಣ ಉದ್ದಿಮೆಗಳು, ಇನ್ಸೂರೆನ್ಸ್ ಮತ್ತು ಎಸ್ ಎಫ್ ಬಿ ಗಳು ಸೇರಿವೆ. ಈ ಗ್ರಾಹಕ ಸದಸ್ಯರು ತಮ್ಮ ಲಕ್ಷಾಂತರ ಭಾರತೀಯ ಗ್ರಾಹಕರ ದೆಮೊಗ್ರಫಿಕ್ ಡೇಟಾ ಮತ್ತು ಸಾಲ ವಸೂಲಾತಿಯ ವಿವರಗಳನ್ನು ನೀಡುತ್ತ ಬಂದಿವೆ. ೨೦೧೪ರಲ್ಲಿ **ಈಕ್ವಿಫ್ಯಾಕ್ಸ್** ಒಂದು ಅನಲಿಟಿಕ್ಸ್ ಸಂಸ್ಥೆಯನ್ನು ಸ್ವಾಧೀನ ಪಡಿಸಿಕೊಂಡು ತನ್ನ ಹೆಜ್ಜೆ ಗುರುತುಗಳನ್ನು ಭಾರತದ ನೆಲದಲ್ಲಿ ಮೂಡಿಸಿತು. **ಈಕ್ವಿಫ್ಯಾಕ್ಸ್** ಅನಲಿಟಿಕ್ಸ್ ಸಂಸ್ಥೆಯು ಸಂಪೂರ್ಣವಾಗಿ **ಈಕ್ವಿಫ್ಯಾಕ್ಸ್** ನ ಸ್ವಾಧೀನದಲ್ಲಿದ್ದು, ಭಾರತದಲ್ಲಿ ಒಂದು ವಿಶ್ಲೇಷಣಾ ಸಂಸ್ಥೆಯಾಗಿದೆ. ಈ ಸಂಸ್ಥೆಯು ತನ್ನ ಸಾಟಿಯಿಲ್ಲದ ಸೇವೆಯ ಮೂಲಕ ಅಸಂಖ್ಯಾತ ಸಂಸ್ಥೆಗಳಿಗೂ, ಅದರ ಗ್ರಾಹಕರಿಗೂ ಏಕಕಾಲದಲ್ಲಿ ಉನ್ನತಿ ಹೊಂದಲು ಕಾರಣಕರ್ತನಾಗಿದೆ.

## ಹಕ್ಕು ನಿರಾಕರಣೆ

ಮೈಕ್ರೋಫೈನಾನ್ಸ್ ಪಲ್ಸ್ ವರದಿಯು ಈಕ್ವಿಫ್ಯಾಕ್ಸ್ ಸಾಲ ಮಾಹಿತಿ ಸೇವೆಗಳ ಸಂಸ್ಥೆ ಪ್ರೈವೇಟ್ ಲಿಮಿಟೆಡ್ (ಈಕ್ವಿಫ್ಯಾಕ್ಸ್) ನಿಂದ ತಯಾರಿಸಲ್ಪಟ್ಟಿದೆ. ಈ ವರದಿಗೆ ಪ್ರವೇಶ ಪಡೆಯುವ ಮತ್ತು ಇದನ್ನು ಬಳಸುವುದರ ಮೂಲಕ, ಉಪಯೋಗಿಸುವ ವ್ಯಕ್ತಿಯು ಈ ಹಕ್ಕು ನಿರಾಕರಣೆಯ ವ್ಯಾಪ್ತಿಗೆ ಒಳಪಡುತ್ತಾನೆ. ಈ ವರದಿಯು ಈಕ್ವಿಫ್ಯಾಕ್ಸ್ ಸಂಸ್ಥೆಯ ಸದಸ್ಯರುಗಳಾದ ಅತಿ ಸಣ್ಣ ಹಣಕಾಸು ಉದ್ದಿಮೆ ಸಂಸ್ಥೆಗಳಿಂದ ಡಿಸೆಂಬರ್ ೨೦೨೧ರ ಅವಧಿಯ ಅನುಸಾರ ಗಣನೀಯ ಪ್ರಮಾಣದಲ್ಲಿ ಒದಗಿಸಲ್ಪಟ್ಟ ಮಾಹಿತಿಯ ಸಂಯೋಜನೆ ಮೇಲೆ ಆಧಾರಿತವಾಗಿದೆ. ಈಕ್ವಿಫ್ಯಾಕ್ಸ್ ಸಂಸ್ಥೆಯು ಎಲ್ಲ ಮುನ್ನೆಚ್ಚರಿಕೆಗಳನ್ನು ತೆಗೆದುಕೊಂಡು ಈ ವರದಿಯನ್ನು ಸಿದ್ಧ ಪಡಿಸಿದ್ದಾಗ್ಯೂ ಕೂಡ, ಮಾಹಿತಿ ಒದಗಿಸಿದ ಸಂಸ್ಥೆಗಳ ಅಂಕಿ ಅಂಶಗಳಲ್ಲಿನ ತಪ್ಪುಗಳ ಅಥವಾ ಲೋಪಗಳ ಕಾರಣದಿಂದ ಈ ವರದಿಯಲ್ಲಿ ಸಂಭವಿಸಿರಬಹುದಾದ ದೋಷಗಳಿಗೆ ತಾನು ಹೊಣೆಗಾರನಲ್ಲ. ಈ ವರದಿಯಲ್ಲಿ ನೀಡಲಾದ ಮಾಹಿತಿಯ ಪರಿಪೂರ್ಣತೆ ಮತ್ತು ನಿಖರತೆ ಮತ್ತು ಯಾವುದೇ ಖಾತ್ರಿಯನ್ನು ನೀಡಲಾಗುವುದಿಲ್ಲ. ಯಾವುದೋ ನಿರ್ದಿಷ್ಟ ಉದ್ದೇಶಕ್ಕಾಗಿ ಈ ವರದಿಯಲ್ಲಿರುವ ಮಾಹಿತಿಯನ್ನು ಬಳಸಿದಲ್ಲಿ ಆ ಉದ್ದೇಶವು ಈಡೇರುವಲ್ಲಿ ಈ ವರದಿಯಲ್ಲಿರುವ ಮಾಹಿತಿಯ ನಿರ್ಭರತೆ ಬಗ್ಗೆ ಖಾತ್ರಿ ನೀಡಲಾಗುವುದಿಲ್ಲ. ಈ ವರದಿಯು ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗೆ ಸಾಲ ನೀಡುವ, ಆರ್ಥಿಕ ವ್ಯವಹಾರ ನಡೆಸುವ ಬಗ್ಗೆ/ ಸಂಸ್ಥೆಯ ಉತ್ಪನ್ನ ಅಥವಾ ಅಪ್ಲಿಕೇಶನ್ ಕುರಿತು ಯಾವುದೇ ರೀತಿಯ ಶಿಫಾರಸು ಅಥವಾ ತಿರಸ್ಕರಣೆಯನ್ನು ಮಾಡುವುದಿಲ್ಲ ಮತ್ತು ಅಂಥ ನಿರ್ಧಾರಗಳಿಗೆ ತಾನು ಹೊಣೆಯಾಗುವುದಿಲ್ಲ. ಈ ವರದಿಯು ಯಾವುದೇ ರೀತಿಯ ಸಲಹೆ ನೀಡುವುದಿಲ್ಲ; ಈ ವರದಿಯ ಬಳಕೆದಾರರು ಈ ವರದಿಯನ್ನಾಧರಿಸಿ ಯಾವುದೇ ಮಹತ್ವದ ತೀರ್ಮಾನ ತೆಗೆದುಕೊಳ್ಳುವ ಮುನ್ನ ಇದರಲ್ಲಿರುವ ಮಾಹಿತಿಯನ್ನು ಕೂಲಂಕಷವಾಗಿ ವಿಶ್ಲೇಷಿಸಿ ತನ್ನ ಅಭಿಮತದಂತೆ ವಿವೇಕಯುತವಾಗಿ ನಿರ್ಧಾರ ಕೈಗೊಳ್ಳಬೇಕಲ್ಲದೆ ತನ್ನ ನಿರ್ಧಾರಗಳಿಗೆ ವರದಿಯನ್ನು ಹೊಣೆ ಮಾಡುವಂತಿಲ್ಲ. ಈ ವರದಿಯ ಬಳಕೆಯು 'ಸಾಲ ಮಾಹಿತಿ ಸಂಸ್ಥೆಗಳ (ನಿಯಂತ್ರಣ) ಅಧಿನಿಯಮ-೨೦೦೫, 'ಸಾಲ ಮಾಹಿತಿ ಸಂಸ್ಥೆಗಳ ನಿಯಂತ್ರಣ-೨೦೦೬, 'ಸಾಲ ಮಾಹಿತಿ ಸಂಸ್ಥೆಗಳ ಕಾಯ್ದೆ-೨೦೦೬ ಇವುಗಳ ನಿಬಂಧನೆಗೆ ಒಳಪಟ್ಟಿರುತ್ತದೆ. ಈ ವರದಿಯ ಯಾವುದೇ ಭಾಗವನ್ನು ಪೂರ್ವಾನುಮತಿಯಿಲ್ಲದೆ ನಕಲು ಮಾಡುವುದು, ಹಂಚುವುದು ಅಥವಾ ಪ್ರಕಟಿಸುವುದಾಗಲಿ ನಿಷಿದ್ಧ.

## ಸಂಪರ್ಕ ವಿವರ

ಈಕ್ವಿಫ್ಯಾಕ್ಸ್ ಕ್ರೆಡಿಟ್ ಇನ್ಫರ್ಮೇಷನ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್
ಯೂನಿಟ್ ಸಂ. ೯೩೧, ಮೂರನೇ ಮಹಡಿ,
ಬಿಲ್ಡಿಂಗ್ ಸಂ. ೯,
ಸಾಲಿಟೆರ್ ಕಾರ್ಪೊರೇಟ್ ಪಾರ್ಕ್,
ಅಂಧೇರಿ ಘಾಟಕೋಪರ್ ಲಿಂಕ್ ರೋಡ್,
ಅಂಧೇರಿ (ಪೂರ್ವ), ಮುಂಬೈ-೪೦೦೦೯೩
ಟೋಲ್ ಫ್ರೀ ಸಂ. : ೧೮೦೦ ೨೦೯೩೨೪೭
ecissupport@equifax.com

ಸ್ಮಾಲ್ ಇಂಡಸ್ಟ್ರೀಸ್ ಡೆವೆಲಪ್ ಮೆಂಟ್ ಬ್ಯಾಂಕ್ ಆಫ್ ಇಂಡಿಯಾ

ಸ್ವಾವಲಂಬನ್ ಭವನ್, ಪ್ಲಾಟ್ ಸಂ. ಸಿ-೧೧, ಜಿ ಬ್ಲಾಕ್, ಬಾಂದ್ರಾ-ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ (ಪೂರ್ವ)

ಮುಂಬೈ-೪೦೦ ೦೫೧ ಮಹಾರಾಷ್ಟ್ರ
ಟೋಲ್ ಫ್ರೀ ಸಂ. : ೧೮೦೦ ೨೨೬೭೫೩

www.sidbi.in/en

Copyright © 2022, Equifax Inc., Atlanta, Georgia. All rights reserved. Equifax is a registered trademarks of Equifax Inc.